

# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**February Vol. : 10 Issue : 9** 5125/ಶೋಭಕೃತ್ ಸಂವತ್ಸರ 2024 ಫೆಬ್ರವರಿ ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಅವಧೂತ ವಿನಯ್ ಶ್ರೀ ಗುರೂಜಿ ಗೌರಿಗದ್ದೆ ಭೇಟಿ: 31.1.2024








ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಶ್ರೀ ವಿದ್ಯಾಗಣಪತಿ ದೇವರ ಶಿಲಾನ್ಯಾಸದ ನಿಮಿತ್ತ ಆಗಮಿಸಿದ ಅವಧೂತ ಶ್ರೀ ವಿನಯ್ ಗುರೂಜಿ ಗೌರಿಗದ್ದೆ ಇವರು ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ, ಶಾಲೆಯ ಚಟುವಟಿಕೆಯನ್ನು ವೀಕ್ಷಿಸಿ, ವೇದವ್ಯಾಸ ಧ್ಯಾನಮಂದಿರಲ್ಲಿ ಶ್ರೀರಾಮನಿಗೆ ದೀಪ ಬೆಳಗಿಸಿ, ಅಗ್ನಿಹೋತ್ರಕ್ಕೆ ಘೃತಾಹುತಿ ನೀಡಿ ಶ್ರೀರಾಮನಾಮ ತಾರಕ ಜಪ ಹಾಗೂ ಸರಸ್ವತಿ ವಂದನೆಯಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಆರ್ಶೀವಚನ ನೀಡಿದರು. ಈ ಸಂದರ್ಭದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶಿರಸಿಯ ರಿಯಲ್ ಎಸ್ಟೇಟ್ ಉದ್ಯಮಿ, ಸಾಮಾಜಿಕ ಹೋರಾಟಗಾರರಾದ ಶ್ರೀ ಅನಂತಮೂರ್ತಿ ಹೆಗಡೆ, ಕಾಪು ವಿಧಾನಸಭೆ ಕ್ಷೇತ್ರದ ಶಾಸಕರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿ, ಹೈಕೋರ್ಟ್‌ನ ಖ್ಯಾತ ನ್ಯಾಯವಾದಿ ಶ್ರೀ ಅರುಣ್ ಶ್ಯಾಮ್, ಆರ್ಥಿಕ ತಜ್ಞೆ ಶ್ರೀಮತಿ ದಿವ್ಯ ಪಾದೆಕಲ್ ಉಪಸ್ಥಿತರಿದ್ದರು.




### ಪ್ರತಿಭಾ ಪುರಸ್ಕಾರ 06.01.2024

2023–2024ನೇ ಸಾಲಿನ ಪ್ರತಿಭಾ ಪುರಸ್ಕಾರ ಮಧುಕರ ಸಭಾಂಗಣದಲ್ಲಿ ನಡೆಯಿತು. ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಮಾತನಾಡಿದರು. 2023–24ನೇ ಸಾಲಿನಲ್ಲಿ ನಡೆದ ಕ್ರೀಡಾಕೂಟ ಮತ್ತು ಪ್ರತಿಭಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ನೀಡಿ ಪುರಸ್ಕರಿಸಲಾಯಿತು.

... ವಿವರಣೆ ಪುಟ 3ರಲ್ಲಿ





### 75ನೇ ಗಣರಾಜ್ಯೋತ್ಸವ ಕಾರ್ಯಕ್ರಮ ದಿನಾಂಕ 26.01.2024

ವಿದ್ಯಾಕೇಂದ್ರದಲ್ಲಿ ಜರಗಿದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶ್ರೀ ನಾರಾಯಣ ಗೌಡ (ಸರಕಾರಿ ಪ್ರೌಢಶಾಲೆಯ ನಿವೃತ್ತ ಕನ್ನಡ ಅಧ್ಯಾಪಕರು ಹಾಗೂ ನಿವೃತ್ತ BRP). ಇವರು ಧ್ವಜಾರೋಹಣ ಮಾಡಿದರು. ವಿದ್ಯಾಕೇಂದ್ರದ ಸಂಚಾಲಕರಾಗಿರುವ ಶ್ರೀ ವಸಂತ ಮಾಧವ ಎಲ್ಲಾ ವಿಭಾಗದ ಪ್ರಮುಖರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ಪ್ರೌಢಶಾಲೆಯಲ್ಲಿ ನಡೆದ ಸಭಾಕಾರ್ಯಕ್ರಮಮದಲ್ಲಿ ಮಕ್ಕಳಿಗೆ ಸಂವಿಧಾನದ ಮಹತ್ವವನ್ನು ತಿಳಿಸಿಕೊಟ್ಟರು. ಹಾಗೂ ರಾಮ ನಾಮ ತಾರಕ ಜಪ ಮಾಡಿದರು.

**ಅಯೋಧ್ಯಾ ಶ್ರೀರಾಮ ಮಂದಿರದ ಲೋಕಾರ್ಪಣೆ ಮತ್ತು ರಾಮಲಲ್ಲಾ ಪ್ರಾಣ ಪ್ರತಿಷ್ಟೆಯ ನೇರ ಪ್ರಸಾರ ಕಾರ್ಯಕ್ರಮ ವೀಕ್ಷಣೆ ಮತ್ತು ಭಜನಾ ಕಾರ್ಯಕ್ರಮವು (22.1.2024) ವಿದ್ಯಾಕೇಂದ್ರದ ಶಿಶುಮಂದಿರ, ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ವಿಭಾಗಗಳಲ್ಲಿ ನೆರವೇರಿತು.**











**ಪೋಷಕರ ಸಭೆ 08.01.2024**

ಪ.ಪೂ ವಿಭಾಗದ ಅಜಿತ ಕುಮಾರ ಸಭಾಂಗಣದಲ್ಲಿ ಶಿಶುಮಂದಿರದ ಪೋಷಕರ ಸಭೆಯನ್ನು ನಡೆಯಿತು. ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಸಂಚಾಲಕರು ಮತ್ತು 130 ಪೋಷಕರು ಉಪಸ್ಥಿತರಿದ್ದರು.



**ವಿವೇಕಾನಂದ ಜಯಂತಿ 13-01-2024**

ಶ್ರೀಲಕ್ಷ್ಮಿಯಲ್ಲಿ ನಡೆದ ವಿವೇಕಾನಂದ ಜಯಂತಿ ಮತ್ತು ಮಕರ ಸಂಕ್ರಾಂತಿ ಆಚರಣೆಗೆ ಶಿಶುಮಂದಿರದ ಆಡಳಿತ ಸಮಿತಿ ಸದಸ್ಯೆಯಾದ ಶ್ರೀಮತಿ ಸಂಗೀತ ಇವರು ಕಥೆಯ ಮೂಲಕ ದಿನದ ಮಹತ್ವವನ್ನು ತಿಳಿಸಿಕೊಟ್ಟರು.



ಅಯೋಧ್ಯೆಯಲ್ಲಿ ನಡೆಯುವ ಶ್ರೀರಾಮನ ಪ್ರಾಣಪ್ರತಿಷ್ಠೆ ಕಾರ್ಯಕ್ರಮಕ್ಕೆ ತೆರಳುವ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರಿಗೆ ಶಿಶುಮಂದಿರದ ಪುಟಾಣಿ ಮಕ್ಕಳು ಆರತಿ ಬೆಳಗಿ, ತಿಲಕವಿಟ್ಟು ಶುಭಕೋರಿದರು.





ಧ್ರುವ ತರಗತಿಯ ಮಕ್ಕಳು 27.01.2024 ರಂದು ಮತ್ತು ಸೀತಾ ತರಗತಿಯ ಮಕ್ಕಳು 20.01.2024ರಂದು ರಂಗಮಂಚದಲ್ಲಿ ಭಾಗವಹಿಸಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಎಲ್ಲಾ ಮಕ್ಕಳು ತುಂಬಾ ಖುಷಿಯಿಂದ ಭಾಗವಹಿಸಿದ್ದರು.



21-01-2024ರಂದು ಮಂಗಳೂರಿನಲ್ಲಿ ನಡೆದ ಲಿಟ್‌ಫೆಸ್ಟ್‌ನಲ್ಲಿ ಶ್ರೀರಾಮ ಶಿಶುಮಂದಿರದ ಪಾಲಕರು ಮತ್ತು ಮಕ್ಕಳು ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ



**ಶಾಲಾ ಸಂಸತ್ತು ಅಧಿವೇಶನ : 6.1.2024**

ಮಹೇಂದ್ರ ಸಭಾಭವನದಲ್ಲಿ 2023-24ನೇ ಶೈಕ್ಷಣಿಕ ವರ್ಷದ ಶಾಲಾ ಸಂಸತ್ತು ಅಧಿವೇಶನ ನಡೆಯಿತು. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದವರು ತಮ್ಮ ತಮ್ಮ ವಾದ ಹಾಗೂ ಪ್ರತಿವಾದವನ್ನು ಮಂಡಿಸಿದರು.



**ವಿವೇಕಾನಂದ ಜಯಂತಿ : 12.1.2024**

ಧಾರ್ಮಿಕ ಚಿಂತಕರಾಗಿರುವ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ವಿವೇಕಾನಂದ ಜಯಂತಿಯ ಮಹತ್ವವನ್ನು ತಿಳಿಸಿಕೊಟ್ಟರು. 154 ಮಕ್ಕಳು ವಿವೇಕಾನಂದರ ವೇಷಭೂಷಣವನ್ನು ಧರಿಸಿ ಸಂಭ್ರಮಿಸಿದರು. ಶ್ರೀಮತಿ ಸುಧಾ ಭಟ್, ಅನಘಾ ಹಾಗೂ ಆದಿತ್ಯಕೃಷ್ಣ, ಉಪಸ್ಥಿತರಿದ್ದರು.




**ಮಕರ ಸಂಕ್ರಮಣ ಆಚರಣೆ : 13.1.2024**

ಶ್ರೀಮತಿ ಪ್ರೀತಾ ಭೀಷ್ಮರ ಚರಿತ್ರೆಯನ್ನು ಮಕ್ಕಳಿಗೆ ತಿಳಿಸಿಕೊಟ್ಟರು. ಮಾಜಿ ಜಿ.ಪಂ ಸದಸ್ಯರಾದ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ದಂಪತಿಗಳು, ಪ್ರಗತಿಪರ ಕೃಷಿಕರಾದ ಶ್ರೀ ಪುಷ್ಪರಾಜ್ ಕೋಟ್ಯಾನ್ ದಂಪತಿಗಳು ಹಾಗೂ ಶ್ರೀ ತಿಮ್ಮಪ್ಪ ಕೋಟ್ಯಾನ್ ದಂಪತಿಗಳು ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.



"ಅಯೋಧ್ಯೆಗೆ ತೆರಳುವ ಸಂದರ್ಭದಲ್ಲಿ ಡಾ। ಪ್ರಭಾಕರ್ ಭಟ್ ಇವರಿಗೆ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕವೃಂದದವರು ಆರತಿ ಬೆಳಗಿ, ತಿಲಕವನ್ನಿಟ್ಟು ಸಿಹಿ ನೀಡಿ ಶುಭಕೋರಿದರು. ಅಯೋಧ್ಯಾ ಹೋರಾಟದ ದಿನಗಳನ್ನು ನೆನಪಿಸುತ್ತಾ, ತಮ್ಮ ಅನುಭವಗಳನ್ನು ಹಂಚಿಕೊಂಡರು. ಕರ್ನಾಟಕಕ್ಕೂ ಅಯೋಧ್ಯೆಗಿರುವ ನಂಟನ್ನು, ರಾಮ-ಹನುಮನ ಕಥೆಯ ಮೂಲಕ ಮಕ್ಕಳಿಗೆ ವಿವರಿಸಿದರು.



**ಮಂಗಳೂರು ಲಿಟ್‌ಫೆಸ್ಟ್‌ನಲ್ಲಿ ಅಧ್ಯಾಪಕ ವೃಂದದವರು ಭಾಗಿ : 21.1.2024**

ಮಂಗಳೂರಿನ ಲಿಲ್ ಫೆಸ್ಟ್‌ನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿ, ಮಕ್ಕಳ ಚುರುಕುತನ, ಲವಲವಿಕೆ ಹಾಗೂ ತೊಡಗಿಸಿಕೊಳ್ಳುವಿಕೆಯಿಂದ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿಯ ಮೆಚ್ಚುಗೆಗೆ ಪಾತ್ರರಾದರು.



**ವಿಜ್ಞಾನ ಕಾರ್ಯಾಗಾರ : 25.1.2024**

ಶೆಲ್‌ಎಸ್.ಎಕ್ಸ್ ಪ್ಲೋರರ್ ವತಿಯಿಂದ 6ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಿದ ವಿಜ್ಞಾನ ಕಾರ್ಯಾಗಾರದಲ್ಲಿ ಮನಿಪಾಲ ಲರ್ನಿಂಗ್ ಲಿಂಕ್ ಪೌಂಡೇಶನ್‌ನ ಮೇಲಾಧಿಕಾರಿ ಶ್ರೀಮತಿ ದೀಕ್ಷಾ 'ವಿಜ್ಞಾನ ಸಂಶೋಧನೆಯನ್ನು ಕೈಗೊಳ್ಳುವ ಮೊದಲು ಬೇಕಾದ ತಯಾರಿ" ಎಂಬ ವಿಷಯದ ಬಗ್ಗೆ ಚಟುವಟಿಕೆಗಳೊಂದಿಗೆ ಮಾಹಿತಿ ನೀಡಿದರು.

## ಸುಭಾಷಿತ ಮಂಜರಿ

ಅಣುಮಾತ್ರಂ ಮನಸ್ತಸ್ಮಾದಾಶಾ
ನಾಮ ಲಶೋದಿತಾ ।
ತನ್ಯಾ ನಾಲಮುಪಘ್ನಾಯ
ಭುವನಾನಿ ಚತುರ್ದಶ

ಮನಸು ಒಂದು ಅಣು, ಅದರಿಂದ ಆಸೆಯೆಂಬ ಬಳ್ಳಿ ಹುಟ್ಟಿದೆ, ಅದು ಹಬ್ಬುವುದಕ್ಕೆ ಹದಿನಾಲ್ಕು ಲೋಕಗಳೂ ಸಾಲವು.

### ಸಂಪಾದಕೀಯ

ಜನವರಿ ತಿಂಗಳ ವರದಿಯೊಂದಿಗಿನ ಸರಯೂ ನಿಮ್ಮ ಮುಂದಿದೆ. ಸ್ವಾಮಿ ವಿವೇಕಾನಂದರ ಜನ್ಮದಿನ, ಮಕರ ಸಂಕ್ರಾಂತಿ ಆಚರಣೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಈ ತಿಂಗಳ ಸಾಮಾನ್ಯ ವರದಿಗಳು. ವಿಶೇಷವಾಗಿ ಅವಧೂತ ಶ್ರೀ ವಿನಯ್ ಗುರೂಜಿ ಭೇಟಿ ವಿಶೇಷವಾಗಿತ್ತು.

ಫೆಬ್ರವರಿ ತಿಂಗಳ 21ರಿಂದ 24ರ ವರೆಗೆ ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ನಡೆಯುವ ಶತಾಬ್ದಿ ಸಂಭ್ರಮ ಕಾರ್ಯಕ್ರಮದ ನಿಮಿತ್ತ ರಾಮನಾಮ ಜಪಯಜ್ಞದ ಕಾರ್ಯಕ್ರಮ ಶಾಲೆಯಲ್ಲಿ ನಿರಂತರವಾಗಿ ನಡೆಯುತ್ತಿದ್ದು, ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು 108 ಬಾರಿ ರಾಮನಾಮ ಜಪಿಸುತ್ತಿದ್ದಾರೆ. ಅನೇಕ ಹಿರಿಯರನ್ನು ಈ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿರುವುದು ವಿಶೇಷವಾಗಿ ಉಲ್ಲೇಖಿಸಬೇಕಾದ ವಿಷಯ.

ವಂದನೆಗಳೊಂದಿಗೆ

ಸಂಪಾದಕ ಬಳಗ

### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ರಮೇಶ್ (ಪಿಯುಸಿ)
ರಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು

**ಪೆನ್ಸಿಲ್ ಬಾಕ್ಸ್ ಚಲನಚಿತ್ರ ವೀಕ್ಷಣೆ : 11.1.24**

ಮಕ್ಕಳು ಅಭಿನಯಿಸಿದ 'ಪೆನ್ಸಿಲ್ ಬಾಕ್ಸ್' ಎಂಬ ಚಲನಚಿತ್ರವನ್ನು ವಿದ್ಯಾರ್ಥಿಗಳೆಲ್ಲರೂ ವೀಕ್ಷಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉಪಸ್ಥಿತರಿದ್ದು ವಿದ್ಯಾರ್ಥಿಗಳೊಂದಿಗೆ ಚಲನಚಿತ್ರವನ್ನು ವೀಕ್ಷಿಸಿದರು.

**ರಕ್ತದ ಗುಂಪಿನ ವರ್ಗೀಕರಣ : 13.1.2024**



ಶ್ರೀರಾಮ ಪದವಿ ಪೂರ್ವ ವಿಭಾಗದ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರು ಪ್ರಾಥಮಿಕ ವಿಭಾಗದ ಎಲ್ಲಾ ವಿದ್ಯಾರ್ಥಿಗಳ ರಕ್ತದ ಗುಂಪಿನ ವರ್ಗೀಕರಣವನ್ನು ನಡೆಸಿಕೊಟ್ಟರು.

**ಭಜನೆ ಹಾಗೂ ಸಾ.ಹುಟ್ಟುಹಬ್ಬ : 13.1.2024**

ಮಾಸಿಕ ಭಜನೆ ಹಾಗೂ ಜನವರಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಮಕ್ಕಳಿಗೆ ಅಧ್ಯಾಪಕ ವೃಂದದವರು ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕಧಾರಣೆ ಮಾಡಿ ಸಿಹಿ ನೀಡಿದರು. ನಂತರ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ನಿಧಿ ಸಮರ್ಪಿಸಿದರು. ಏಳನೇ ತರಗತಿಯ ಧಾತ್ರಿ ವೈಯಕ್ತಿಕ ಗೀತೆಯನ್ನು ಹಾಡಿದಳು.

**ಭಜನಾ ಕಾರ್ಯಕ್ರಮ : 19.1.2024**



ಅಮ್ಮೂರು ಕೇಶವ ನಗರದ ಶ್ರೀ ಶಾರದಾಂಬ ಭಜನಾ ಮಂದಿರದ 36ನೇ ವಾರ್ಷಿಕೋತ್ಸವದ ಪ್ರಯುಕ್ತ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳ ಭಜನಾ ತಂಡವು ಭಾಗವಹಿಸಿ ಭಜನಾ ಕಾರ್ಯಕ್ರಮ ನೀಡಿದರು.

**ರಾಮಲಲ್ಲಾ ಪ್ರಾಣ ಪ್ರತಿಷ್ಠೆಯ ನೇರ ಪ್ರಸಾರ ಕಾರ್ಯಕ್ರಮ ವೀಕ್ಷಣೆ ಮತ್ತು ಭಜನಾ ಕಾರ್ಯಕ್ರಮ : 22.1.2024**

ದಿನಾಂಕ 22.1.2024ರಂದು ಉತ್ತರಪ್ರದೇಶದ ಅಯೋಧ್ಯೆಯಲ್ಲಿ ನಡೆದ ರಾಮಲಲ್ಲಾನ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದ ನೇರಪ್ರಸಾರವನ್ನು ಒಂದನೇ ತರಗತಿಯ ವಿದ್ಯಾರ್ಥಿಗಳು ಶಾರದಾದೇವಿಯಲ್ಲಿ, 2ನೇ ತರಗತಿಯ ವಿದ್ಯಾರ್ಥಿಗಳು ಜನಕದಲ್ಲಿ ಉಳಿದ ಎಲ್ಲಾ ವಿದ್ಯಾರ್ಥಿಗಳು ವೇದವ್ಯಾಸ ಧ್ಯಾನಮಂದಿರದಲ್ಲಿ ವೀಕ್ಷಿಸಿದರು. ಮೊದಲಿಗೆ ತರಗತಿವಾರು ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ಹಾಗೂ 108 ಬಾರಿ ರಾಮನಾಮ ತಾರಕ ಮಂತ್ರ ಜಪಿಸಲಾಯಿತು. ರಾಮಲಲ್ಲಾನ ಪ್ರಾಣ ಪ್ರತಿಷ್ಠೆಯ ನಂತರ ಪೂರ್ವಗುರುಕುಲದ ವಿದ್ಯಾರ್ಥಿಗಳು ರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತನ ವೇಷಧರಿಸಿ, ಮಹಾಮಂಗಳಾರತಿಯಲ್ಲಿ ಪಾಲ್ಗೊಂಡರು.

ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಸಿಹಿ ನೀಡಿ ಸಂಭ್ರಮಿಸಲಾಯಿತು.


**ಬಹುಮಾನ ವಿತರಣೆ : 24.1.2024**

ಕರಾಟೆ, ಈಜುಸ್ಪರ್ಧೆ, ಶಾಂತಿವನ ಟ್ರಸ್ಟ್ ನಡೆಸಿದ ಸ್ಪರ್ಧೆ ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಾದ ಕ್ರಮವಾಗಿ ಮಾನಸ, ಅನನ್ಯ ಎ.ಆರ್, ಧಾತ್ರಿ, ನಿನಾದ್ ಕೈರಂಗಳ, ತ್ರಿಶಾನಿ ಹಾಗೂ ನಿಹಾರಿಕ ಎಂ ಇವರಿಗೆ ಬಹುಮಾನವಿತ್ತು ಅಭಿನಂದಿಸಲಾಯಿತು.

**ಪುಸ್ತಕ ಕೊಡುಗೆ : 25.1.2024**

ಒಂದನೇ ತರಗತಿಯ ವಿದ್ಯಾರ್ಥಿಗಳು ತರಗತಿ ಗ್ರಂಥಾಲಯಕ್ಕೆ ತಮ್ಮಲ್ಲಿದ್ದ ಪುಸ್ತಕವನ್ನು ಕೊಡುಗೆಯಾಗಿ ಶಾಲೆಗೆ ನೀಡಿದರು.

**ಅಭಿನಂದನಾ ಕಾರ್ಯಕ್ರಮ : 26.1.2024**



ಕಬಡ್ಡಿಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಾದ ಚಿಂತನ್ ಜಿ, ಸಂಕೀರ್ತ್ ಶೆಟ್ಟಿ, ಶ್ರೇಯಾಂಕ್ ಆರ್ ವಿ ಇವರಿಗೆಲ್ಲಾ ಗಣರಾಜ್ಯೋತ್ಸವದ ಅಂಗವಾಗಿ ಬಂಟ್ವಾಳ ತಹಶೀಲ್ದಾರ ಕಛೇರಿಯಲ್ಲಿ ಅಭಿನಂದಿಸಲಾಯಿತು.

**ರಾಜ್ಯಮಟ್ಟದ "ಮಕ್ಕಳ ಜಗಲಿ ಕಲಾ ಪ್ರಶಸ್ತಿ 2023" : 26.1.2024**

'ಮಕ್ಕಳ ಜಗಲಿ' ಎಂಬ ಎಳೆಯರ ಪ್ರತಿಭೆಯ ಪತ್ರಿಕೆಯ 'ಮಕ್ಕಳ ಜಗಲಿ ಕಲಾ ಪ್ರಶಸಿ–2023'ಕ್ಕೆ ಪ್ರಾಥಮಿಕ ವಿಭಾಗದ 3ನೇ

ತರಗತಿಯ ನಿಹಾರಿಕ ಎಂ ಭಾಜನರಾಗಿದ್ದಾರೆ. ಹಾಗೆಯೇ 6ನೇ ತರಗತಿಯ ನಿನಾದ್ ಕೈರಂಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

**ಭಾರತ ಮಾತಾ ಪೂಜನ : 26.1.2024**



ತಾಯಿ ಭಾರತಿಯನ್ನು ಮನಪೂರ್ವಕವಾಗಿ ಪೂಜಿಸುವ ಯೋಜನೆಯೇ ಭಾರತಮಾತಾ ಪೂಜನ ಕಾರ್ಯಕ್ರಮ. ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಲ್ಲಿ ಭಾರತ್ ಮಾತಾ ಪೂಜನ ಕಾರ್ಯಕ್ರಮ ನಡೆಸಿ, ಭಾವಚಿತ್ರವನ್ನು ಅಧ್ಯಾಪಕರಿಗೆ ಕಲಿಸಿಕೊಟ್ಟರು.

**ಅಂತರ್ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ: 28.1.24**



ವಿಜಯವಾಣಿ ಪತ್ರಿಕೆಯವರು ಆಯೋಜಿಸಿದ ಅಂತರ್ ಜಿಲ್ಲಾಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ 3ನೇ ತರಗತಿಯ ನಿಹಾರಿಕಾ ಎಂ ಪ್ರಥಮ ಸ್ಥಾನ ಪಡೆದಿರುತ್ತಾರೆ

## ಪ್ರೌಢಶಾಲೆ

**ಪ್ರತಿಭಾ ಪುರಸ್ಕಾರ 06.01.2024**

2023–2024ನೇ ಸಾಲಿನ ಪ್ರತಿಭಾ ಪುರಸ್ಕಾರ ಮಧುಕರ ಸಭಾಂಗಣದಲ್ಲಿ ನಡೆಯಿತು. ಆಗಮಿಸಿದಂತಹ ಎಲ್ಲಾ ಅತಿಥಿಗಳು ಶ್ರೀ ರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿರುವ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ವಸಂತ ಮಾಧವ ಶ್ರೀಮಾನ್ ಎಲ್ಲಾ ವಿದ್ಯಾರ್ಥಿಗಳಿಗೆ ದೊರಕಿರುವಂತಹ ಬಹುಮಾನಗಳು ಶ್ರೀರಾಮನಿಗೆ ಸಮರ್ಪಣೆ, ಶ್ರೀರಾಮ ತಾರಕ ಜಪ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಏಕಾಗ್ರತೆ ಮೂಡಲು ಸಾಧ್ಯ" ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾ ಕೇಂದ್ರದ ಸಹ ಸಂಚಾಲಕರಾದ ಶ್ರೀ ರಮೇಶ್ ಶ್ರೀಮಾನ್, ಅದೇ ರೀತಿ ಸಮುದ್ರ ಹೋಟೆಲ್ ಕುದ್ರೆಬೆಟ್ಟು ಇದರ ಮಾಲೀಕರಾದ ಮಹಾಬಲೇಶ್ವರ ಶೆಟ್ಟಿ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ವರಾಹ ಎಂಟರ್ಪ್ರೈಸಸ್ ಕುದ್ರಬೆಟ್ಟು ಇದರ ಉದ್ಯಮಿಯಾದ ಯುವರಾಜ್ ನೆಕ್ಕಿಲಾರು , ಇನ್ಫೋಸಿಸ್ ಉದ್ಯೋಗಿ ಯಾದ ತೀರ್ಥೇಶ್ ಕೆಲಿಂಜ, ವಿಶ್ವಹಿಂದು ಪರಿಷತ್ ಮಂಚಿ ಘಟಕದ ಅಧ್ಯಕ್ಷರು ಮತ್ತು ಸಾಮಾಜಿಕ ಕಾರ್ಯಕರ್ತರು ಆಗಿರುವ ರಮೇಶ್ ಕುಕ್ಕಾಜೆ ಮತ್ತು ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಗೋಪಾಲ್ ಎಂ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿಮಿತ್ತ ವಿದ್ಯಾರ್ಥಿಗಳಿಗೆ ಪುಷ್ಪರಾಜ್ ಕಲ್ಲಡ್ಕ (ಸಿವಿಲ್ ಕಂಟ್ರಾಕ್ಟರ್) ಇವರ ವತಿಯಿಂದ ಸಿಹಿತಿಂಡಿ ವಿತರಿಸಲಾಯಿತು. ಕಾರ್ಯಕ್ರಮವನ್ನು ಅಪೇಕ್ಷ ನಿರೂಪಿಸಿ,ಚಂದ್ರಕಲಾ ಸ್ವಾಗತಿಸಿ, ಭೂಷಣ್ ಧನ್ಯವಾದ ಸಮರ್ಪಿಸಿದರು. ಶಾಂತಿಮಂತ್ರದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

**ರಾಮ ನಾಮ ತಾರಕ ಜಪ 13.1.2024**



ಪ್ರೌಢಶಾಲೆಯಲ್ಲಿ ನಡೆದ ರಾಮ ನಾಮ ತಾರಕ ಜಪ ಕಾರ್ಯಕ್ರಮದಲ್ಲಿ ನಿವೃತ್ತ ದೈಹಿಕ ಶಿಕ್ಷಕರಾದ ರಾಧಾಕೃಷ್ಣ ಅಡ್ಯಂತಾಯ ಹಾಗೂ ಶ್ರೀಮತಿ ಕವಿತಾ ಅಡ್ಯಂತಾಯ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ರಾಧಾಕೃಷ್ಣ ಅಡ್ಯಂತಾಯ ಅವರು ರಾಮಜನ್ಮಭೂಮಿ ಹೋರಾಟದ ಬಗ್ಗೆ ವಿದ್ಯಾರ್ಥಿಗಳ ಮನಮುಟ್ಟುವಂತೆ ತಿಳಿಸಿಕೊಟ್ಟರು. ರಾಮ ಜನ್ಮಭೂಮಿ ಹೋರಾಟದ ಸಂದರ್ಭದಲ್ಲಿನ ಹಾಡನ್ನು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟು ವಿದ್ಯಾರ್ಥಿಗಳಲ್ಲಿ ದೇಶ ಮತ್ತು ಧರ್ಮದ ಬಗ್ಗೆ ಜಾಗೃತಿಯನ್ನು ಮೂಡಿಸಿದರು. ನಂತರ ಘೋಷ್ ಸ್ಪರ್ಧೆಯಲ್ಲಿ ಪ್ರಾಂತ ಮಟ್ಟದಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

**ಭಜನಾ ವಾರ್ಷಿಕೋತ್ಸವದಲ್ಲಿ ಭಾಗಿ**



ಶ್ರೀ ಶಾರದಾಂಬ ಭಜನಾ ಮಂದಿರ ಕೇಶವ ನಗರ, ಇದರ 36ನೇ ಭಜನಾ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡ ಶ್ರೀ ರಾಮ ಪ್ರೌಢಶಾಲಾ ವಿದ್ಯಾರ್ಥಿಗಳ ತಂಡ.

**14ನೇ ರಾಷ್ಟ್ರೀಯ ಮತದಾನ ದಿನಾಚರಣೆಯ ಕಾರ್ಯಕ್ರಮ 25.01.2024**



ತಾಲೂಕು ಆಡಳಿತ ಮಂಡಳಿ ಮತ್ತು ತಾಲೂಕು ಪಂಚಾಯಿತಿ ಬಂಟ್ವಾಳ ಇದರ ಆಶ್ರಯದಲ್ಲಿ ನಡೆದ 14ನೇ ರಾಷ್ಟ್ರೀಯ ಮತದಾನ ದಿನಾಚರಣೆಯ ಕಾರ್ಯಕ್ರಮದ ಪ್ರಯುಕ್ತ ನಡೆಸಿದ ತಾಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿಗಳಾದ ಭೂಷಣ್ ಮತ್ತು ದುರ್ಗಾಶರಣ್ ದ್ವಿತೀಯ ಬಹುಮಾನ ಪಡೆದಿರುತ್ತಾರೆ .

**ಗಣರಾಜ್ಯೋತ್ಸವದಲ್ಲಿ ಘೋಷ್ ತಂಡ 26.1.24**



ಬಿ.ಸಿ.ರೋಡ್‌ನ ತಾಲೂಕು ಕಚೇರಿ ಮುಂಭಾಗದಲ್ಲಿ ಜರಗಿದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಪ್ರೌಢಶಾಲೆಯ ಘೋಷ್ ತಂಡ ಭಾಗವಹಿಸಿತು.

**ಸನ್ಮಾನ ಕಾರ್ಯಕ್ರಮ 26.01.2024**



ಈಜು ಸ್ಪರ್ಧೆಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ಅನರ್ಘ್ಯ ಇವಳಿಗೆ ಬಂಟ್ವಾಳ ತಹಶೀಲ್ದಾರ ಕಚೇರಿಯಲ್ಲಿ ಇಂದು ಸನ್ಮಾನಿಸಲಾಯಿತು.

## ಪದವಿಪೂರ್ವ

**ಪ್ರತಿಭಾ ಪುರಸ್ಕಾರ ಕಾರ್ಯಕ್ರಮ** 2.1.2024 ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಶ್ವ ವಿಭಾಗ ಸಂಯೋಜಕರಾದ ಶ್ರೀ ಸೌಮಿತ್ರ ಗೋಖಲೆ ಮಾತನಾಡಿ ಶ್ರೀರಾಮ ವಿದ್ಯಾಕೇಂದ್ರವು ವಿದ್ಯಾರ್ಥಿಗಳಿಗೆ ಪಠ್ಯ ಶಿಕ್ಷಣದೊಂದಿಗೆ ಜೀವನ ಶಿಕ್ಷಣವನ್ನು ಕೂಡ ನೀಡುತ್ತಿರುವುದು ಸಂತೋಷದ ಸಂಗತಿ, ಸ್ವಾಮಿ ವಿವೇಕಾನಂದರ ಆದರ್ಶ ನಮಗೆಲ್ಲರಿಗೂ ದಾರಿದೀಪವಾಗಬೇಕು ಎಂದರು. ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಶಿಕ್ಷಣ ಸಂಯೋಜಕರಾದ ಶ್ರೀಮತಿ ಸುಜಾತ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು ಪ್ರತಿಭಾನ್ವಿತರಿಗೆ ನಿರುದ್ಯೋಗ ಸಮಸ್ಯೆ ಉದ್ಭವಿಸಲಾರದು ಎಂದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀರಾಮ ವಿದ್ಯಾ ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಮಾತನಾಡಿ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ವಿದ್ಯಾರ್ಥಿಗಳನ್ನು ಶ್ರೀರಾಮ ವಿದ್ಯಾಕೇಂದ್ರ ಪ್ರೋತ್ಸಾಹಿಸುವುದು ಮಾತ್ರವಲ್ಲದೆ ಶ್ರೀ ರಾಮ ನಾಮ ಜಪಯಜ್ಞದ ಮೂಲಕ ವಿದ್ಯಾರ್ಥಿಗಳಲ್ಲಿರುವ ಶಾರೀರಿಕ, ಬೌದ್ಧಿಕ ಮತ್ತು ಮಾನಸಿಕ ಅಂಧಕಾರವನ್ನು ಹೋಗಲಾಡಿಸಬಹುದು ಎಂದರು ಕಾರ್ಯಕ್ರಮದಲ್ಲಿ ಶ್ರೀ ದೇವಪ ಗುರುದತ್ತ ಶೆಣೈ ಬಂಟ್ವಾಳ, ಪಾಣೆಮಂಗಳೂರು ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಜಯ ಶಂಕರ ಬಾಸ್ರಿತಾಯ, ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ ಶ್ರೀರಾಮ ಸೆಕೆಂಡರಿ ಸ್ಕೂಲ್ ನ ಮಾತೃಭಾರತಿಯ ಅಧ್ಯಕ್ಷರಾದ ಶ್ರೀಮತಿ ಶ್ವೇತಾ ಕಾಮತ್, ಕಾರ್ಯದರ್ಶಿ ಶ್ರೀಮತಿ ಜಯಶ್ರೀ, ಪ್ರಾಚಾರ್ಯರಾದ ಶ್ರೀ ವಸಂತ್ ಬಲ್ಲಾಲ್, ಶ್ರೀರಾಮ ಸೆಕೆಂಡರಿ ಸ್ಕೂಲ್ ನ ಉಪ ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು. ಹಿಂದಿ ಉಪನ್ಯಾಸಕಿ ಶ್ರೀಮತಿ ಶೋಭಾ ಸ್ವಾಗತಿಸಿ ಗಣಿತಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಕೆ ವಂದಿಸಿದರು ಉಪನ್ಯಾಸಕಿಯರಾದ ಶ್ರೀಮತಿ ಚೈತನ್ಯ ಪ್ರಕಾಶ್, ಕುಮಾರಿ ವಿಜೇತ ಶ್ರೀಮತಿ ರಮ್ಯ, ಶ್ರೀಮತಿ ಹರ್ಷಿತ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳ ಪಟ್ಟಿಯನ್ನು ವಾಚಿಸಿದರು ಅರ್ಥಶಾಸ್ತ್ರ ಉಪನ್ಯಾಸಕಿ ಕುಮಾರಿ ನಯನ ಕಾರ್ಯಕ್ರಮ ನಿರೂಪಿಸಿದರು.

**ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು ಭೇಟಿ 05.01.2024**



ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು ಪುತ್ತೂರು ಮತ್ತು ವಿವೇಕಾನಂದ ಫಾರ್ಮಸಿ ಕಾಲೇಜ್ ಪುತ್ತೂರಿಗೆ ಭೇಟಿ ನೀಡಿದರು.

**ಪ್ರೌಢಶಾಲಾ ಭೇಟಿ** 8.1.24



ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದ ವಿದ್ಯಾರ್ಥಿಗಳಿಗೆ ಶ್ರೀರಾಮ ಪದವಿಪೂರ್ವ ವಿಭಾಗದಲ್ಲಿರುವ ಕೋರ್ಸ್ ಗಳ ಬಗ್ಗೆ ಮತ್ತು ಸೌಲಭ್ಯಗಳ ಬಗ್ಗೆ ಶ್ರೀ ವಸಂತ ಬಲ್ಲಾಳ್, ಶ್ರೀ ಅಶೋಕ್ ಕುಮಾರ್, ಶ್ರೀ ಮತಿ ಚೈತನ್ಯ, ಶ್ರೀಮತಿ ಶೃತಿ, ಕು.ನಯನಾ, ಶ್ರೀಮತಿ ಸುಭಾಷಿಣಿ, ಕು.ಅಕ್ಷಿತಾ ಇವರು ಮಾಹಿತಿ ನೀಡಿದರು. ದಿನಾಂಕ 25/01/2024ರಂದು ಸರಕಾರಿ ಪ್ರೌಢ ಶಾಲೆ ಕಡೇಶಿವಾಲಯದ ವಿದ್ಯಾರ್ಥಿಗಳಿಗೆ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ನೀಡಿದರು,ಉಪನ್ಯಾಸಕರಾದ ಮಹೇಂದ್ರ ಮಂಜುನಾಥ್ ಭಟ್ ಸಹಕರಿಸಿದರು.

**ಸಿ.ಇ.ಟಿ ಸಂಬಂಧಿತ ವಿಶೇಷ ತರಗತಿ**

ದಿನಾಂಕ 03.1.2024 ಮತ್ತು 04/1/2024 ರಂದು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರಿಂದ 'ಸಿ.ಇ.ಟಿ ಸಂಬಂಧಿತ ವಿಶೇಷ ತರಗತಿ'ಗಳು ನಡೆಯಿತು. ಈ ಕಾರ್ಯಕ್ರಮದಲ್ಲಿ ರವಿಶಂಕರ್ ಮತ್ತು ಮಾಧವಿ ಪೈ ಇವರುಗಳು ಗಣಿತಶಾಸ್ತ್ರ ವಿಷಯವನ್ನು , ರವೀಶ್ ಇವರು ಭೌತಶಾಸ್ತ್ರವನ್ನು, ಚೇತನ್ ಇವರು ರಸಾಯನಶಾಸ್ತ್ರ ವಿಷಯವನ್ನು ಬೋಧಿಸಿದರು.

**ವೃತ್ತಿ ಮಾರ್ಗದರ್ಶನ 6.1.24**

ವಾಣಿಜ್ಯ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಪಿಯುಸಿ ಶಿಕ್ಷಣದ ನಂತರದ ವೃತ್ತಿಪರ ಕೋರ್ಸುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಪುತ್ತೂರು ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮಿ, ಶ್ರೀಯುತ ವಿನ್ಯಾಸ್, ಶ್ರೀ ಅರುಣ್ ಕುಮಾರ್ ಮತ್ತು ಶ್ರೀ ಪ್ರಶಾಂತ್, ವಿದ್ಯಾರ್ಥಿಗಳಿಗೆ ನೀಡಿದರು, ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಶ್ರೀಮಾನ್ ಕಾರ್ಯಕ್ರಮ ನಿರ್ವಹಿಸಿದರು.

**"ಪೆನ್ಸಿಲ್ ಬಾಕ್ಸ್" ಮಕ್ಕಳ ಚಲನಚಿತ್ರ ಪ್ರದರ್ಶನ**

11.01.2024 ರಂದು ಶ್ರೀ ದಯಾನಂದ ರೈ ನಿರ್ಮಾಣದ ಪೆನ್ಸಿಲ್ ಬಾಕ್ಸ್ ಮಕ್ಕಳ ಚಲನಚಿತ್ರವನ್ನು ಪ್ರದರ್ಶಿಸಲಾಯಿತು ಚಲನಚಿತ್ರ ಪ್ರದರ್ಶನದ ಕೊನೆಯಲ್ಲಿ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ದಿನೇಶ್ ಚಿತ್ರತಂಡವನ್ನು ಸ್ವಾಗತಿಸಿ ಧನ್ಯವಾದ ಸಮರ್ಪಿಸಿದರು.

**ರಾಮ ತಾರಕ ಜಪ ಯಜ್ಞ 13.01.2024**



ಶ್ರೀರಾಮ ತಾರಕ ಜಪ ಯಜ್ಞ ಕಾರ್ಯಕ್ರಮದಲ್ಲಿ ಶ್ರೀ ಸತ್ಯ ನಾರಾಯಣ ಭಟ್ ಮತ್ತು ಆಶಾ ಲಕ್ಷ್ಮಿ ದಂಪತಿ ಪಾಲ್ಗೊಂಡರು, ವೇದಿಕೆಯಲ್ಲಿ ಪ್ರಾಚಾರ್ಯರಾದ ವಸಂತ ಬಲ್ಲಾಲ್ ಉಪಸ್ಥಿತರಿದ್ದು ಶ್ರೀಮತಿ ಚೈತನ್ಯ ಕಾರ್ಯಕ್ರಮ ನಿರ್ವಹಿಸಿದರು.

**ಎ.ಟಿ.ಎಲ್ ಮ್ಯಾರಥಾನ್ ಕಾರ್ಯಗಾರ 16.1.24**

ಅಟಲ್ ಟಿಂಕರಿಂಗ್ ಲ್ಯಾಬಿನಲ್ಲಿ ದೇಶದಾದ್ಯಂತ ನಡೆಯುವ ಎ ಟಿ ಎಲ್ ಮ್ಯಾರಥಾನ್ ಎಂಬ ಮಹಾ ಸ್ಪರ್ಧೆಗೆ ಮೊದಲ ಹಂತದ ಮಾದರಿ ತಯಾರಿಕಾ ಕಾರ್ಯಾಗಾರ ನಡೆಯಿತು. ಶ್ರೀರಾಮ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ ಶ್ರೀಮಾನ್ ದೀಪ ಬೆಳಗಿಸಿ ಕಾರ್ಯಾಗಾರದ ಉದ್ಘಾಟಿಸಿದರು. ನಂತರ ಮಾತನಾಡಿ ಚಂದ್ರಯಾನ –3 ವಿಶೇಷತೆಯನ್ನು ಸ್ಮರಿಸಿ, ದೇಶದ ಘನತೆಗೆ ತಂತ್ರಜ್ಞಾನಗಳ ಕೊಡುಗೆಯನ್ನು ತಿಳಿಸಿದರು ಮತ್ತು ಹೊಸ ಹೊಸ ತಂತ್ರಜ್ಞಾನಗಳನ್ನು ಕಲಿತು ಮಕ್ಕಳು ನವವಿಜ್ಞಾನಿಗಳಾಗಿ ಹೊರಹೊಮ್ಮಬೇಕು ಎಂದು ಕಿವಿಮಾತು ನುಡಿದರು. ಕಾರ್ಯಕ್ರಮದಲ್ಲಿ ವಿತ್ವರ ಟೆಕ್ನಾಲಜೀಸ್ ಮಂಗಳೂರಿನ ಶ್ರೀ ಮಾಲತೇಶ್ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಶ್ರೀವತ್ಸ ಕಾರ್ಯಕ್ರಮ ನಿರೂಪಿಸಿದರು. ರೋಹಿಣಿ ಮಾತಾಜಿ ಕಾರ್ಯಕ್ರಮ ಸಂಯೋಜಿಸಿದರು.

**ಶ್ರೀರಾಮನ ಪ್ರಾಣ ಪ್ರತಿಷ್ಠೆ ವೀಕ್ಷಣೆ 22.01.2024** ಪದವಿ ಪೂರ್ವ ವಿಭಾಗದಲ್ಲಿ ಅಯೋಧ್ಯೆಯಲ್ಲಿ ಶ್ರೀ ರಾಮನ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದ ನೇರಪ್ರಸಾರವನ್ನು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ವೀಕ್ಷಣೆ ಮಾಡಿದರು.

**ಶಿಲಾನ್ಯಾಸ ಕಾರ್ಯಕ್ರಮ 30.01.2024**

ಕಲ್ಲಡ್ಕ ಶ್ರೀ ರಾಮ ಮಂದಿರದಲ್ಲಿ ಶ್ರೀ ವಿದ್ಯಾ ಗಣಪತಿ ದೇವರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು ಪಾಲ್ಗೊಂಡು ದೇವರಿಗೆ ಕ್ಷೀರಾಭಿಷೇಕ ಮಾಡಿ ಪ್ರಾರ್ಥನೆ ಸಲ್ಲಿಸಿದರು.

**ಆಯಿಷ್ಮಾನ್ ಆನ್ಲೈನ್ ಕಾರ್ಯಾಗಾರದಲ್ಲಿ ಭಾಗಿ 10.01.24**

ಆಯಿಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಾಲೇಜಿನ ವಿದ್ಯಾರ್ಥಿ ಮತ್ತು ಅವರ ಕುಟುಂಬದವರಿಗೆ ತಲುಪಿಸಲು ವಿಶೇಷ ಸಭೆಯನ್ನ ದಕ್ಷಿಣಕನ್ನಡ ಜಿಲ್ಲಾ ಆರೋಗ್ಯ ಇಲಾಖೆ ಇಂದು ಗೂಗಲ್ ಮೀಟ್ ನಡೆಸಿತು. ABPMJAY-CMS-ARK-CARD ಮಾಡುವ ಮಾಹಿತಿಯನ್ನು ಆರೋಗ್ಯ ಇಲಾಖೆ ಯ ಅಧಿಕಾರಿಗಳು ನೀಡಿದರು. ಈ ಸಭೆಯಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಯತಿರಾಜ್ ಪಿ. ಭಾಗವಹಿಸಿದರು. ಆಯಿಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಾಲೇಜಿನ ವಿದ್ಯಾರ್ಥಿ ಮತ್ತು ಅವರ ಕುಟುಂಬದವರಿಗೆ ತಲುಪಿಸಲು ವಿಶೇಷ ಸಭೆಯನ್ನ ದಕ್ಷಿಣಕನ್ನಡ ಜಿಲ್ಲಾ ಆರೋಗ್ಯ ಇಲಾಖೆ ಇಂದು ಗೂಗಲ್ ಮೀಟ್ ನಡೆಸಿತು. ABPMJAY-CMS-ARK-CARD ಮಾಡುವ ಮಾಹಿತಿಯನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳು ನೀಡಿ–ದರು. ಈ ಸಭೆಯಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಯತಿ–ರಾಜ್ ಪಿ. ಭಾಗವಹಿಸಿದರು.

**ವಿದ್ಯಾಭಾರತಿಯ ಬೋಧಮಾಲಾ ಪರೀಕ್ಷೆ**

ದಿನಾಂಕ 30.01.2024 ರಂದು ವಿದ್ಯಾಭಾರತಿಯ ಅಖಿಲ ಭಾರತೀಯ ಸಂಸ್ಕೃತಿ ಜ್ಞಾನ ಪರಿಚಯದ ಬೋಧಮಾಲಾ ಪರೀಕ್ಷೆಯನ್ನು ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ನಡೆಸಲಾಯಿತು.

**ವಿಚಾರ ಸಂಕಿರಣದಲ್ಲಿ ಭಾಗಿ 20.01.2024**

ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ) ವಿವೇಕಾನಂದ ಕಾನೂನು ಮಹಾವಿದ್ಯಾಲಯ ಮತ್ತು ಅಧಿವಕ್ತ ಪರಿಷದ್, ಪುತ್ತೂರು ಘಟಕ ಇದರ ಸಹಯೋಗದಲ್ಲಿ "ಧರ್ಮ ಯುದ್ಧದಲ್ಲಿ ನ್ಯಾಯಶಾಸ್ತ್ರ: ರಾಮ ಜನ್ಮಭೂಮಿ ಹೋರಾಟದಲ್ಲಿ ನ್ಯಾಯ ಸಮರ"ಎಂಬ ವಿಷಯದ ಕುರಿತು ವಿಚಾರ ಸಂಕಿರಣವು ವಿವೇಕಾನಂದ ಕಾಲೇಜು ನೆಹರು ನಗರ, ಪುತ್ತೂರು ಇಲ್ಲಿನ ಕೇಶವ ಸಂಕಲ್ಪ ಸಭಾಭವನದಲ್ಲಿ ನಡೆಯಿತು. ಈ ವಿಚಾರ ಸಂಕಿರಣದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿಗಳಾದ ಚೈತನ್ಯ ಕೆ, ತುಷಿತ, ರಕ್ಷಾ, ನೂತನ್ ರಾಜ್, ಅಕ್ಷಯ್ ನರಸಿಂಹ, ಧನ್ಯ, ದೀಕ್ಷಾ, ಅನನ್ಯ. ಹಾಗೂ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಕು। ಸಂಧ್ಯಾ ಮಾತಾಜಿ ಇವರು ಭಾಗವಹಿಸಿರುತ್ತಾರೆ

**ಲಿಟ್ ಫೆಸ್ಟ್ ಕಾರ್ಯಕ್ರಮದಲ್ಲಿ ಭಾಗಿ**

20–01–2024 ಮತ್ತು 21–01–24 ರಂದು ಮಂಗಳೂರನಲ್ಲಿ ನಡೆದ ಲಿಟ್ ಫೆಸ್ಟ್ ಕಾರ್ಯಕ್ರಮದಲ್ಲಿ ಪದವಿ ವಿಭಾಗದಿಂದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್, ಶ್ರೀಮತಿಸುಕನ್ಯಾ ಮಾತಾಜಿ, ಕುದಿಕ್ಷಿತಾ ಮಾತಾಜಿ ಹಾಗೂ ಶ್ರೀಮತಿ ಪ್ರಸನ್ನ ಮಾತಾಜಿ ಭಾಗವಹಿಸಿರುತ್ತಾರೆ.

**ಬಾಲರಾಮನ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮ ನೇರಪ್ರಸಾರ ವೀಕ್ಷಣೆ 22.01.2024**

ದಿನಾಂಕ 22.01.2024ನೇ ಸೋಮವಾರ ಅಯೋಧ್ಯೆಯಲ್ಲಿ ಜರಗಿದ ಬಾಲರಾಮನ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮದ ನೇರ ಪ್ರಸಾರವನ್ನು ಪದವಿ ಕಾಲೇಜಿನ ಸಿಬ್ಬಂದಿಗಳು, ವಿದ್ಯಾಕೇಂದ್ರದ ಸಂಚಾಲಕರು ಮತ್ತು ವಿದ್ಯಾರ್ಥಿಗಳು ವೀಕ್ಷಿಸಿದರು.

**NSS ಪೂರ್ವಭಾವಿ ಸಭೆ 23.01.2024**

ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಮೊಂತಿಮಾರ್ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆಸುವುದು ಎಂದು ಯೋಜನೆ ಹಾಕಿಕೊಂಡಿದೆ. ಶಿಬಿರದ ಹಿನ್ನಲೆಯಲ್ಲಿ ಪ್ರಾಚಾರ್ಯರ ನೇತೃತ್ವದಲ್ಲಿ, ಮೊಂತಿಮಾರ್ ದೇವಸ್ಥಾನದಲ್ಲಿ ಊರಿನ ಹಿರಿಯರೊಂದಿಗೆ ಪೂರ್ವಭಾವಿ ಸಭೆ ನಡೆಯಿತು.

**ರಾಷ್ಟ್ರೀಯ ಮತದಾನ ದಿನ 25.01.2024**

ರಾಷ್ಟ್ರೀಯ ಮತದಾನ ದಿನದ ಅಂಗವಾಗಿ ಕಾಲೇಜಿನ ಮತದಾರರ ಸಾಕ್ಷರತಾ ಘಟಕ ಮತ್ತು ಭಾರತೀಯ ಜನತಾ ಪಾರ್ಟಿ ಇದರ ಸಹಯೋಗದೊಂದಿಗೆ ವಿದ್ಯಾಕೇಂದ್ರದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದ ಜೆ. ಪಿ ನಡ್ಡಾ ಹಾಗೂ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಯುವ ಮತದಾರನ್ನು ಉದ್ದೇಶಿಸಿ ಮತದಾನದ ಮಹತ್ವದ ಕುರಿತು ಆಡಿದ ಮಾತುಗಳನ್ನು ವಿದ್ಯಾರ್ಥಿಗಳು ಪರದೆಯ ಮೂಲಕ ವೀಕ್ಷಿಸಿದರು. ಈ ಕಾರ್ಯಕ್ರಮದಲ್ಲಿ ಡಾ. ಪ್ರಭಾಕರ್ ಭಟ್ ಕಲ್ಲಡ್ಕ, ಕಿಶೋರ್ ಪಲಿಪಾಡಿ ಅಧ್ಯಕ್ಷರು ಬಿಜೆಪಿ ಯುವಮೋರ್ಚಾ ಬಂಟ್ವಾಳ, ಸುದರ್ಶನ್ ಬಜ ಪ್ರಧಾನ ಜಿಲ್ಲಾ ಕಾರ್ಯದರ್ಶಿ ಯುವಮೋರ್ಚಾ ದಕ್ಷಿಣ ಕನ್ನಡ, ವರುಣ್ ರಾಜ್ ಜಿಲ್ಲಾ ಕಾರ್ಯದರ್ಶಿ ಬಿಜೆಪಿ ಯುವಮೋರ್ಚಾ ದಕ್ಷಿಣ ಕನ್ನಡ, ಶ್ರೀ ಅಜಿತ್ ಶೆಟ್ಟಿ ಅಧ್ಯಕ್ಷರು ಕಾವಳ ಮೂಡೂರು ಗ್ರಾಮ ಪಂಚಾಯಿತಿ, ಶ್ರೀ ದಿನೇಶ್ ದಾಂಬೆದಾರ್ ಯುವಮೋರ್ಚಾ ಬಂಟ್ವಾಳ ಹಾಗೂ ಪ್ರಾಂಶುಪಾಲರು ಶ್ರೀ ಕೃಷ್ಣಪ್ರಸಾದ್ ಕಾಯರಕಟ್ಟೆ ಇವರು ಉಪಸ್ಥಿತರಿದ್ದರು.



ಆಪ್ತ ಸಮಾಲೋಚನಾ ಕಾರ್ಯಕ್ರಮ 8.1.24

ವೆನ್‌ಲಾಕ್ ಆಸ್ಪತ್ರೆಯ ಆಪ್ತ ಸಮಾಲೋಚನ ಅಧಿಕಾರಿಯಾದ ಶ್ರೀಮತಿ ಅಕ್ಷತ ಕಾಮತ್ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯಗಳ ಸೇವನೆ, ಜಂಕ್‌ಫುಡ್, ಕ್ಯಾನ್ಸರ್, ಮೊಬೈಲ್ ಬಳಕೆಯ ದುರುಪಯೋಗ, ಅತ್ಯಾಚಾರ, ಲೈಂಗಿಕ ಕಿರುಕುಳದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು, ಹಾಗೂ ಹದಿಹರೆಯದ ಸಮಸ್ಯೆಗಳ ಬಗ್ಗೆಮಾಹಿತಿ ನೀಡಿದರು.



ವಿವೇಕಾನಂದ ಜಯಂತಿ 12.01.2024

ವಿವೇಕಾನಂದ ವಿದ್ಯಾಲಯ ಪುತ್ತೂರು ಇಲ್ಲಿ ಜರಗಿದ ವಿವೇಕಾನಂದ ಜಯಂತಿ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳು, ಪೋಷಕರು ಮತ್ತು ಅಧ್ಯಾಪಕರ ತಂಡ ಭಾಗವಹಿಸಿದರು.



ಶ್ರೀರಾಮಕೃಷ್ಣ ಶಾಲೆ ಯಾದಗಿರಿ ಮೈಸೂರು ಇಲ್ಲಿ ಕ್ರೀಡಾ ಭಾರತಿ ಕರ್ನಾಟಕ ಇವರು ನಡೆಸಿದ ರಾಜ್ಯಮಟ್ಟದ ಸ್ಕೂಲ್ ಬ್ಯಾಂಕ್ ಸ್ಪರ್ಧಾಕೂಟ 2024ರಲ್ಲಿ ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದ ಘೋಷ್ ತಂಡ 6ನೇ ಸ್ಥಾನದೊಂದಿಗೆ ಬಹುಮಾನ ಪಡೆದುಕೊಂಡಿದೆ.



ಪ್ರೌಢಶಾಲೆಗೆ ಡಿಡಿಪಿಐ ಕಚೇರಿಯಿಂದ ಬೇಟಿ:

ಗಣಿತ ವಿಷಯ ಪರಿವೀಕ್ಷಕರಾದ ಡಿಡಿಪಿಐ ಕಚೇ-ರಿಯ ಶ್ರೀಮತಿ ಶೋಭಾ ಇವರು ಭೇಟಿ ನೀಡಿ 10ನೇ ತರಗತಿಗೆ ಪಾಠ ಮಾಡುವ ಅಧ್ಯಾಪಕರಿಗೆ ಮಾರ್ಗದರ್ಶನ ಮಾಡಿದರು.



ಪೋಷಕರ ಸಭೆ 30.01.2024

8, 9ನೇ ತರಗತಿಯ ವಿದ್ಯಾರ್ಥಿಗಳ ಪೋಷಕರ ಸಭೆಯಲ್ಲಿ ಡಾ. ಪ್ರಭಾಕರ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಸಂಚಾಲಕರು, ಸಹಸಂಚಾಲಕರು ಆಡಳಿತಾಧಿಕಾರಿ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಭಾರತೀಯ ಭಾಷಾ ಸಮಿತಿ ನವದೆಹಲಿ ಆಯೋಜಿಸಿರುವ ಏಕಾಹಿಕೀ ಕಾರ್ಯಶಾಲಾ, ಸರಳ ಮಾನಕ ಸಂಸ್ಕೃತಂ ವಿಷಯದ ಪ್ರಶಿಕ್ಷಣ ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ಶ್ರೀ ಜಯರಾಮ, ಕು. ದೀಕ್ಷಿತಾ ಹಾಗೂ ಪ್ರಾಥಮಿಕ ಶಾಲೆಯ ಅನ್ನಪೂರ್ಣ ಮಾತಾಜಿ, ಅಕ್ಷತಾ ಮಾತಾಜಿ ಭಾಗವಹಿಸಿದರು

## ಪದವಿಪೂರ್ವ



ಸಿ.ಇ.ಟಿ ವಿದ್ಯಾರ್ಥಿ ಮಿತ್ರ 03.01.24

ತಾಲೂಕು ಮಟ್ಟದ ಕಾರ್ಯಕ್ರಮವನ್ನು ಸ.ಪ.ಪೂ. ಕಾಲೇಜು ವಾಮದಪದವಿನ ಪ್ರಾಂಶುಪಾಲರು ಶ್ರೀ ಶ್ರೀಧರ್‌ರವರು ಉದ್ಘಾಟಿಸಿದರು. ಬೆಂಜನಪದವು ಪ.ಪೂ ಕಾಲೇಜಿನ ಉಪನ್ಯಾಸಕಿ ಸಂಧ್ಯಾರಾಣಿ ಇವರು ಉಪಸ್ಥಿತರಿದ್ದರು.



ವ್ಯಕ್ತಿತ್ವ ವಿಕಸನ ತರಗತಿ 04.01.2024

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ಪುತ್ತೂರಿನ ಉಪನ್ಯಾಸಕರು ಹಾಗೂ ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್ ನ ಸಂಸ್ಥಾಪಕರಾದ ಡಾ. ಶ್ರೀಶ ಭಟ್ ಇವರಿಂದ ವಿದ್ಯಾರ್ಥಿಗಳಿಗೆ ವಿಶೇಷ ವ್ಯಕ್ತಿತ್ವ ವಿಕಸನ ತರಗತಿ' ನಡೆಸಿದರು.



ಸ್ವಾಮಿ ವಿವೇಕಾನಂದ ಜಯಂತಿ 12.01.2024 ರಂದು ರಾಷ್ಟ್ರಸಂತ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಗೋಪಾಲ್ ಶೆಣ್ಯೆ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಪನ್ಯಾಸಕರು ಉಪಸ್ಥಿತರಿದ್ದರು.



ಪೋಷಕರ ಸಭೆ 16.01.2024

ದ್ವಿತೀಯ ಪಿ ಯು ಸಿ ವಿದ್ಯಾರ್ಥಿಗಳ ಪೋಷಕರ ಸಭೆಯಲ್ಲಿ ಡಾ। ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು ಉಪಸ್ಥಿತರಿದ್ದರು



ಎ.ಟಿ.ಎಲ್ ಮ್ಯಾರಥಾನ್ ಕಾರ್ಯಾಗಾರ 16.1.2024

ಅಟಲ್ ಟಿಂಕರಿಂಗ್ ಲ್ಯಾಬಿನಲ್ಲಿ ದೇಶದಾದ್ಯಂತ ನಡೆಯುವ ಎ.ಟಿ.ಎಲ್ ಮ್ಯಾರಥಾನ್ ಎಂಬ ಮಹಾ ಸ್ಪರ್ಧೆಗೆ ಮೊದಲ ಹಂತದ ಮಾದರಿ ತಯಾರಿಕಾ ಕಾರ್ಯಾಗಾರ ನಡೆಯಿತು.



ಶ್ರೀ ಸಾಯಿನಿಕೇತನ ಸೇವಾಶ್ರಮ ದೈಗೋಳಿಗೆ ಭೇಟಿ 12.01.2024

ಭರತ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳು ಶ್ರೀ ಸಾಯಿ ನಿಕೇತನ ಸೇವಾಶ್ರಮ ದೈಗೋಳಿಗೆ ಭೇಟಿ ನೀಡಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



**ರಾಮಾಯಣ ಪಾರಾಯಣದಲ್ಲಿ ಭಾಗಿ 20.01.24**

ಜನವರಿ19, 20, 21ರಂದು ಸಂಸ್ಕೃತ ಭಾರತಿಯ ವತಿಯಿಂದ ಮಂಗಳೂರಿನ ಸಂಘನಿಕೇತನದಲ್ಲಿ ಆಯೋಜಿಸಲಾದ ಸಂಪೂರ್ಣ ರಾಮಾಯಣ ಪಾರಾಯಣದಲ್ಲಿ 20ರಂದು ಕಿಷ್ಕಿಂಧಾ ಕಾಂಡದ 43ನೇ ಸರ್ಗದಿಂದ ಸುಂದರ ಕಾಂಡದ 3ನೇ ಸರ್ಗದ ವರೆಗೆ ಅಂದಾಜು 980 ಶ್ಲೋಕಗಳನ್ನು 2 ಗಂಟೆಗಳ ಅವಧಿಯಲ್ಲಿ ವಿದ್ಯಾಕೇಂದ್ರದ ಸಂಸ್ಕೃತ ಅಧ್ಯಾಪಕರು, ಉಪನ್ಯಾಸಕರು, ವಿದ್ಯಾರ್ಥಿಗಳು ಪಾರಾಯಣ ಮಾಡಿದರು.



**151ನೇ ವಿವೇಕಾನಂದ ಜಯಂತಿ 12.1.24**

ಆಳ್ವಾಸ್ ಕಾಲೇಜು, ಮೂಡಬಿದಿರೆ ಇಲ್ಲಿನ ಪ್ರಾಧ್ಯಾಪಕಿ ಶ್ರೀಮತಿ ಚೈತ್ರ ಇವರು ವಿವೇಕಾನಂದರ ಪ್ರತಿಮೆಗೆ ಪುಷ್ಪಾರ್ಚನೆಗೈದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾಲೇಜಿನ ಉಪನ್ಯಾಸಕ, ಉಪನ್ಯಾಸಕೇತರವೃಂದ ಮತ್ತು ವಿದ್ಯಾರ್ಥಿಗಳು ಪುಷ್ಪಾರ್ಚನೆಗೈದರು .ಕನ್ನಡ ಉಪನ್ಯಾಸಕಿಯಾದ ಶ್ರೀಮತಿ ರಶ್ಮಿತಾ ಮಾತಾಜಿ ಕಾರ್ಯಕ್ರಮ ನಿರ್ವಹಿಸಿದರು.




ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ) ವಿವೇಕಾನಂದ ಕಾನೂನು ಮಹಾವಿದ್ಯಾಲಯ ಮತ್ತು ಅಧಿವಕ್ತ ಪರಿಷದ್, ಪುತ್ತೂರು ಘಟಕ ಇದರ ಸಹಯೋಗದಲ್ಲಿ "ಧರ್ಮ ಯುದ್ಧದಲ್ಲಿ ನ್ಯಾಯಶಾಸ್ತ್ರ: ಎಂಬ ವಿಚಾರ ಸಂಕಿರಣದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಾದ ಚೈತನ್ಯ ಕೆ, ತುಷಿತ, ರಕ್ಷಾ, ನೂತನ್ ರಾಜ್, ಅಕ್ಷಯ್ ನರಸಿಂಹ,ಧನ್ಯ, ದೀಕ್ಷಾ, ಅನನ್ಯ. ಹಾಗೂ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಕು। ಸಂಧ್ಯಾ ಮಾತಾಜಿ ಇವರು ಭಾಗವಹಿಸಿರುತ್ತಾರೆ






**ರಾಷ್ಟ್ರೀಯ ಮತದಾನ ದಿನ 25.01.2024:** ರಾಷ್ಟ್ರೀಯ ಮತದಾನ ದಿನದ ಅಂಗವಾಗಿ ಕಾಲೇಜಿನ ಮತದಾರರ ಸಾಕ್ಷರತಾ ಘಟಕ ಮತ್ತು ಭಾರತೀಯ ಜನತಾ ಪಾರ್ಟಿ ಇದರ ಸಹಯೋಗದೊಂದಿಗೆ ಶ್ರೀರಾಮ ವಿದ್ಯಾಸಂಸ್ಥೆಯಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ಇದರ ಅಂಗವಾಗಿ ಬಿಜೆಪಿಯ ಅಧ್ಯಕ್ಷರಾದ ಜೆ.ಪಿ ನಡ್ಡ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಯುವ ಮತದಾರನ್ನು ಉದ್ದೇಶಿಸಿ ಮತದಾನದ ಮಹತ್ವದ ಕುರಿತು ಆಡಿದ ಮಾತುಗಳನ್ನು ವಿದ್ಯಾರ್ಥಿಗಳು ಪರದೆಯ ಮೂಲಕ ವೀಕ್ಷಿಸಿದರು.




ಪದವಿ ಪೂರ್ವ ವಿಭಾಗದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ 2.1.2024ರಂದು ನಡೆಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಶ್ವ ವಿಭಾಗ ಸಂಯೋಜಕರಾದ ಶ್ರೀ ಸೌಮಿತ್ರ ಗೋಖಲೆ, ಡಾ। ಪ್ರಭಾಕರ ಭಟ್ ಕಲ್ಲಡ್ಕ, ಶ್ರೀ ದೇವಪ ಗುರುದತ್ತ ಶೆಣೈ, ಬಂಟ್ವಾಳ, ಪಾ.ಸೇವಾ ಸ.ಸಂಘದ ಅಧ್ಯಕ್ಷರಾದ ಶ್ರೀ ಜಯಶಂಕರ ಬಾಸ್ರಿತಾಯ, ಶ್ರೀ ನಾಗೇಶ್ ಕಲ್ಲಡ್ಕ ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ಮಾತೃಭಾರತಿಯ ಅಧ್ಯಕ್ಷರಾದ ಶ್ರೀಮತಿ ಶ್ವೇತಾ ಕಾಮತ್, ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7.5% |
| 92ರಿಂದ 181 ದಿನಗಳು | – 8% |
| 182 ರಿಂದ 364 ದಿನಗಳು | – 9% |
| 1 ವರ್ಷ ಮತ್ತು ಮೇಲ್ಪಟ್ಟು | – 10% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :9 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿದೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363